**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ: ತಳವಾರ ಸಾಬಣ್ಣಾ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಉತ್ತರ.**

ಪ್ರಶ್ನೆ:

ಸನ್ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯದ ಜಾನಪದ ಇತಿಹಾಸ ಮತ್ತು ಪರಂಪರೆ ಹಾಗೂ ಗ್ರಾಮೀಣ ಕೃಷಿಕ ಸಮುದಾಯಗಳು, ರೈತರು, ಕಾರ್ಮಿಕರು, ಶ್ರಮಿಕರು, ದಲಿತರು, ಅಲೆಮಾರಿಗಳು, ಬುಡಕಟ್ಟು ಜನರು ಮತ್ತು ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳಸುವ ಕಾರ್ಯವನ್ನು ರಾಜ್ಯದ ಜಾನಪದ ವಿಶ್ವವಿದ್ಯಾಲಯ ಮಾಡುತ್ತಿದೆ. 'ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗೆ ನೀಡಿಲ್ಲ ವೇತನ' ಎಂಬ ಶೀರ್ಷಿಕೆ ಅಡಿಯಲ್ಲಿ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಚ್ಛತಾ ಸಿಬ್ಬಂದಿ, ಗಾರ್ಡನ್ ಸಿಬ್ಬಂದಿ, ವಾಹನ ಚಾಲಕರು, ಭದ್ರತಾ ಕೆಲಸಗಾರರು, ಕಛೇರಿ ಸಹಾಯಕರು ಹಾಗೂ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಿಗೆ ಕಳೆದ 5 ತಿಂಗಳಿಗೂ ಹೆಚ್ಚಿನ ಸಂಬಳ ನೀಡಿಲ್ಲ. ಇದರಿಂದ ಸಿಬ್ಬಂದಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಜಾನಪದ ವಿಶ್ವವಿದ್ಯಾಲಯದಲ್ಲಿ ಪೂರ್ಣಕಾಲಿಕ ಮತ್ತು ಅರೆಕಾಲಿಕ ಪ್ರಾಧ್ಯಾಪಕರಿಗೆ ಅತಿ ಕಡಿಮೆ ವೇತನ ನೀಡಲಾಗುತ್ತಿದೆ. ಕಳೆದ 10 ವರ್ಷದಿಂದ ಕೇವಲ 25 ಸಾವಿರ ವೇತನ ಪೂರ್ಣಕಾಲಿಕ ಅತಿಥಿ ಪ್ರಾಧ್ಯಾಪಕರಿಗೆ ನೀಡಲಾಗುತ್ತಿದೆ. ಪೂರ್ಣಕಾಲಿಕ ಮತ್ತು ಅರೆಕಾಲಿಕ ಪ್ರಾಧ್ಯಾಪಕರಿಗೆ ವರ್ಷದಲ್ಲಿ 7 ತಿಂಗಳ ಕಾರ್ಯಾಭಾರ ಹಾಗೂ ನೇಮಕಾತಿ ಆದೇಶವನ್ನು ನೀಡುವುದಿಲ್ಲ. ಆದರೆ, ಬೇರೆ ವಿಶ್ವವಿದ್ಯಾಲಯಗಳಲ್ಲಿ 11 ತಿಂಗಳ ಕಾರ್ಯಾಭಾರ ಹಾಗೂ ನೇಮಕಾತಿ ಆದೇಶ ನೀಡುತ್ತಿದ್ದಾರೆ. ಸಾಕಷ್ಟು ಬಾರಿ ಕುಲಪತಿಗಳು, ಕುಲಸಚಿವರಿಗೆ ವೇತನ ಪಾವತಿಸುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದರಿಂದ ಸಿಬ್ಬಂದಿಗಳ ದೈನಂದಿನ ಜೀವನ ನಿರ್ವಹಣೆ ಕಷ್ಟವಾಗಿರುತ್ತದೆ. ಈ ಹಿನ್ನಲೆಯಲ್ಲಿ, ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನ ಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಉತ್ತರ:

ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಇಡಿ 251 ಯುಎನ್ಇ 2011, ದಿನಾಂಕ: 16.04.2012ರಲ್ಲಿ ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸಿ, ಬೋಧಕ ಹುದ್ದೆಗಳನ್ನು ಯುಜಿಸಿ/ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ನೇರ ನೇಮಕಾತಿ ಮಾಡಲು, ಸಂಶೋಧನಾ ಹಾಗೂ ತಾಂತ್ರಿಕ ವಿಭಾಗದ ಹುದ್ದೆಗಳನ್ನು ನಿಯೋಜನೆ ಮೇಲೆ ಭರ್ತಿ ಮಾಡಲು ಹಾಗೂ ಆಡಳಿತ ವಿಭಾಗದ ಹುದ್ದೆಗಳನ್ನು ನಿಯೋಜನೆ ಹಾಗೂ ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮೋದಿಸಲಾಗಿದೆ

| ವೃಂದ | ಹುದ್ದೆಗಳ ಸಂಖ್ಯೆ |
|---|---|
| **ಬೋಧಕ-ವಿಭಾಗ** | |
| ಪ್ರಾಧ್ಯಾಪಕರು | 03 |
| ಸಹ-ಪ್ರಾಧ್ಯಾಪಕರು | 06 |
| ಸಹಾಯಕ ಪ್ರಾಧ್ಯಾಪಕರು | 09 |
| ಅತಿಥಿ ಪ್ರಾಧ್ಯಾಪಕರು ವರ್ಷಕ್ಕೊಬ್ಬರಂತೆ | 03 |
| **ಒಟ್ಟು** | **21** |
| ಸಂಶೋಧನಾ ವಿಭಾಗ | 11 |
| ತಾಂತ್ರಿಕ ಹಾಗೂ ಸಂಕೀರ್ಣ ವಿಭಾಗ | 05 |
| ಆಡಳಿತ ವಿಭಾಗ | 19 |
| **ಒಟ್ಟು** | **56** |

ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ವೇತನ ಮತ್ತು ಪಿಂಚಣಿಗಾಗಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ;

**(ರೂ. ಲಕ್ಷಗಳಲ್ಲಿ)**

| ಆರ್ಥಿಕ ವರ್ಷ | ವೇತನ | ಸಹಾಯಾನುದಾನ ಸಾಮಾನ್ಯ/ಅಭಿವೃದ್ಧಿ | ಪರಿಶಿಷ್ಟ ಜಾತಿ ಉಪಯೋಜನೆ | ಪರಿಶಿಷ್ಟ ಪಂಗಡ ಉಪಯೋಜನೆ | ಒಟ್ಟು |
|---|---|---|---|---|---|
| 2023-24 | 306.30 | 75.99 | 17.00 | 7.00 | 406.33 |
| 2024-25 | 364.33 | 76.00 | 17.00 | 7.00 | 464.33 |
| 2025-26 | 479.36 | 38.00 | 8.50 | 3.50 | 529.36 |

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ, 2011ರ ಪ್ರಕರಣ 54ರಡಿ ವಿಶ್ವವಿದ್ಯಾಲಯದ ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ಮಂಜೂರಾದ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ವಿಳಂಬವಿಲ್ಲದೆ, ಒಂದು ವರ್ಷಕ್ಕೆ ಮೀರದ ಅವಧಿಗೆ ತಾತ್ಕಾಲಿಕ ನೇಮಕಾತಿಗಳನ್ನು ಮಾಡಲು ನಿಯಮವನ್ನು ಕಲ್ಪಿಸಲಾಗಿದ್ದು, ಅದರನ್ವಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪ್ರತಿ ಶೈಕ್ಷಣಿಕ ವರ್ಷ ಬೋಧನಾ ಕಾರ್ಯಗಳು ಆರಂಭವಾಗುವ ಮುಂಚಿತವಾಗಿ ದಿನಪತ್ರಿಕೆಗಳಲ್ಲಿ ತಾತ್ಕಾಲಿಕ ಅತಿಥಿ ಉಪನ್ಯಾಸಕರ/ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ನಿಯಮಾನುಸಾರ ಸಂದರ್ಶನ ನಡೆಸಿ ಆಯ್ಕೆ ಮಾಡಿ ಆದೇಶ ಹೊರಡಿಸಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ವಿಶ್ವವಿದ್ಯಾಲಯವು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಅರ್ಹ ಉಪನ್ಯಾಸಕರಿಗೆ ಆಯಾ ಶೈಕ್ಷಣಿಕ ಸಾಲಿನ ಬೋಧನಾ ಕಾರ್ಯಭಾರದನ್ವಯ ವೇತನವನ್ನು ನಿಗದಿಪಡಿಸುತ್ತದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಈ ಕೆಳಕಂಡಂತೆ ಸೇವೆಗಳನ್ನು ಹೊರಗುತ್ತಿಗೆ /ತಾತ್ಕಾಲಿಕ ಆಧಾರದ ಮೇಲೆ ಬೋಧಕ ಬೋಧಕೇತರ ಸಿಬ್ಬಂದಿಗಳನ್ನು ಪಡೆದುಕೊಂಡಿರುತ್ತದೆ.

| | |
|---|---|
| **ಹೊರಗುತ್ತಿಗೆ** | ಸ್ವಚ್ಛತಾ ಸಿಬ್ಬಂದಿ |
| | ಗಾರ್ಡನ್ ಸಿಬ್ಬಂದಿ |
| | ವಾಹನ ಚಾಲಕರು |
| | ಭದ್ರತಾ ಕೆಲಸಗಾರರು |
| | ಕಚೇರಿ ಸಹಾಯಕರು |
| **ತಾತ್ಕಾಲಿಕ** | ಸಹಾಯಕ ಪ್ರಾಧ್ಯಾಪಕರು |

ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ತಾತ್ಕಾಲಿಕ ನೌಕರರಿಗೆ/ಅತಿಥಿ ಉಪನ್ಯಾಸಕರಿಗೆ/ಹೊರಗುತ್ತಿಗೆ ನೌಕರರಿಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ. ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಅವುಗಳ ಆಂತರಿಕ ಸಂಪನ್ಮೂಲದಿಂದ ವೇತನವನ್ನು ನೀಡುತ್ತವೆ.

ಕರ್ನಾಟಕದ ಜನಪದ ಸಾಹಿತ್ಯ, ಕಲೆ, ಸಂಗೀತ, ರಂಗಭೂಮಿ, ಕರಕುಶಲಕಲೆ, ಜಾನಪದ ವೈದ್ಯಪದ್ಧತಿ, ಆಹಾರ, ಪಾನೀಯ, ಗುಡಿಕೈಗಾರಿಕೆಯಂತಹ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆ ಅವಕಾಶವನ್ನು ಕಲ್ಪಿಸುವ ದೃಷ್ಟಿಯಿಂದ ವಿಶೇಷ ಕಾಯ್ದೆಯಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದ್ದು, ಸದರಿ ವಿಶ್ವವಿದ್ಯಾಲಯಕ್ಕೆ ಯಾವುದೇ ಸಂಯೋಜಿತ ಕಾಲೇಜುಗಳು ಇರುವುದಿಲ್ಲ ಹಾಗೂ ಈ ವಿಶ್ವವಿದ್ಯಾಲಯವು ಸರ್ಕಾರವು ನೀಡುವ ಅನುದಾನದಲ್ಲಿ ನಡೆಯುತ್ತಿದ್ದು, ಆಂತರಿಕ ಸಂಪನ್ಮೂಲ ಕ್ರೋಢೀಕರಣದ ಲಭ್ಯತೆಯು ಅಲ್ಪ ಪ್ರಮಾಣದಲ್ಲಿದ್ದು, ಈ ವಿಶ್ವವಿದ್ಯಾಲಯದಲ್ಲಿರುವ ತಾತ್ಕಾಲಿಕ ಬೋಧಕ ಸಿಬ್ಬಂದಿಗಳಿಗೆ ಆಯಾ ಶೈಕ್ಷಣಿಕ ಸಾಲಿನ ಬೋಧನಾ ಕಾರ್ಯಭಾರದನ್ವಯ ಮಾಸಿಕ ರೂ. 25000 /- ಗಳನ್ನು ಹಾಗೂ ತಾತ್ಕಾಲಿಕ ಅತಿಥಿ ಉಪನ್ಯಾಸಕರಿಗೆ ರೂ. 12500/-ಗಳನ್ನು ವಿಶ್ವವಿದ್ಯಾಲಯವು ನೀಡುತ್ತಿದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ. 13.02.2025 ಮತ್ತು 09.05.2025ರಂದು ಸಭೆಗಳನ್ನು ನಡೆಸಿದ್ದು, ಇಲ್ಲಿಯವರೆಗೂ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಮಂಡಿಸಿ ವಿಶ್ವವಿದ್ಯಾಲಯಗಳು ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಸದೃಢಗೊಳ್ಳಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಸಂಖ್ಯೆ: ಇಡಿ 280 ಯುಎನ್‌ಇ 2025**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ, ಸಚಿವರು